ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

# ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡವಳಿಗಳು

**ವಿಷಯ:** ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿ ವೃಂದದ ಕೆಲವು ಹುದ್ದೆಗಳನ್ನು ಸ್ಥಳಾಂತರಿಸಿ ಪುನರ್‌ವ್ಯವಸ್ಥೆಯಿಂದ ಮರುನಾಮಕರಣ ಗೊಳಿಸುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ ಆಇ 121 ವಾತೆಸಿ 94 ಬೆಂಗಳೂರು, ದಿನಾಂಕ: 04.02.1995.

***

**ಪ್ರಸ್ತಾವನೆ:**

ಈ ಕೆಳಕಂಡ ಕಾರಣಗಳ ಹಿನ್ನೆಲೆಯಲ್ಲಿ, ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಯಲ್ಲಿ ಇಲಾಖಾ ಕಾರ್ಯಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಕೆಲವು ಶಾಖೆಗಳಿಗೆ ಹೆಚ್ಚುವರಿ ಹುದ್ದೆಗಳನ್ನು ಒದಗಿಸುವ ಮೂಲಕ ಬಲಪಡಿಸುವ ಅವಶ್ಯಕತೆ ಇರುತ್ತದೆ.

(1) ರಾಜ್ಯದಲ್ಲಿ ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಜಾರಿಯಾದ ಮೇಲೆ, ಕರದಾತರ ಹಾಗೂ ಎಲ್ಲಾ ಭಾಗೀದಾರರ ಅನುಕೂಲಕ್ಕಾಗಿ ಹಾಗೂ ಅವರಲ್ಲಿ ಕಾಯ್ದೆಯ ಅನುಪಾಲನೆಯ ಬಗ್ಗೆ ಬರಬಹುದಾದ ಎಲ್ಲಾ ರೀತಿಯ ಸಂದೇಹಗಳಿಗೆ ಮಾರ್ಗೋಪಾಯಗಳನ್ನು ಒದಗಿಸುವ ಉದ್ದೇಶಕ್ಕಾಗಿ ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಯಲ್ಲಿ ಪ್ರತ್ಯೇಕವಾಗಿ ಸುಸಜ್ಜಿತ ಸಹಾಯಪೀಠವನ್ನು ಈಗಾಗಲೇ ತೆರೆಯಲಾಗಿದೆ. ಈ ಉದ್ದೇಶಕ್ಕಾಗಿ ಆಯುಕ್ತರ ಕಛೇರಿಯಲ್ಲಿ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರ ವೃಂದದ ಒಂದು ಹುದ್ದೆ ಮಂಜೂರಾಗಿದ್ದು, ಸದರಿ ಹುದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯವರ ಕಾರ್ಯಬಾಹುಳ್ಯವನ್ನು ಅವಲೋಕಿಸಿ ಮತ್ತೊಂದು ವಾಣಿಜ್ಯ ತೆರಿಗೆ ಅಧಿಕಾರಿ ಹುದ್ದೆಯನ್ನು ಸಹಾಯಪೀಠಕ್ಕೆ ಒದಗಿಸುವ ಅವಶ್ಯಕತೆ ಕಂಡುಬರುತ್ತದೆ.

(2) ಇಲಾಖೆಯು ನಿರ್ವಹಿಸುವ ಹಾಗೂ ನಿರ್ವಹಿಸುತ್ತಿದ್ದ ಎಲ್ಲಾ ಕಾಯ್ದೆಗಳಡಿಯಲ್ಲಿನ ಬಾಕಿ ತೆರಿಗೆ ವಸೂಲಾತಿಗೆ ಸಂಬಂಧಿಸಿದ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಉದ್ದೇಶದಿಂದ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಪರಿಷ್ಕರಣೆ ಮತ್ತು ವಸೂಲಿ) ಇವರಿಗೆ ಮೇಲುಸ್ತುವಾರಿ ಕಾರ್ಯವನ್ನು ವಹಿಸಲಾಗಿದೆ. ಸದರಿ ಶಾಖೆಯಲ್ಲಿ ಪ್ರಸ್ತುತ ನಿರ್ವಹಿಸುತ್ತಿರುವ ಕಾರ್ಯಗಳ ಜೊತೆಯಲ್ಲಿ ಬಾಕಿ ತೆರಿಗೆ ವಸೂಲಾತಿಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಉಸ್ತುವಾರಿ ಮಾಡುವ ಮೂಲಕ ರಾಜಸ್ವ ಸಂಗ್ರಹಣೆಗೆ ಒತ್ತು ನೀಡುವ ಅವಶ್ಯಕತೆ ಇರುವುದರಿಂದ, ಈ ಶಾಖೆಗೆ ಎರಡು ಹೆಚ್ಚುವರಿಯಾಗಿ ವಾಣಿಜ್ಯ ತೆರಿಗೆ ಅಧಿಕಾರಿ ಹುದ್ದೆಗಳನ್ನು ಹಾಗೂ ಎರಡು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಒದಗಿಸುವುದು ಅವಶ್ಯಕವೆಂದು ಕಂಡುಬರುತ್ತದೆ.

(3) ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಯಲ್ಲಿ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಲೆಕ್ಕಪರಿಶೋಧನೆ) ಶಾಖೆಯಲ್ಲಿ ರಾಜ್ಯದ ಎಲ್ಲಾ ವಲಯಗಳ ಜಾರಿ ಚಟುವಟಿಕೆಗಳ ಮೇಲುಸ್ತುವಾರಿ ಮಾಡುವುದರ ಜೊತೆಗೆ ವಿವಿಧ ಕಾಯ್ದೆಗಳಡಿಯಲ್ಲಿ ಕರನಿರ್ಧಾರಣೆ/ ಮರುಕರನಿರ್ಧಾರಣೆ ಆದೇಶ ಹೊರಡಿಸುವ ಉದ್ದೇಶಕ್ಕಾಗಿ ಕಾರ್ಯವ್ಯಾಪ್ತಿ ಹಾಗೂ ಪ್ರಕರಣವಾರು ಕಾರ್ಯಸೂಚಿಗಳನ್ನು ನೀಡುವ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಸದರಿ ಶಾಖೆಗೆ ಒಂದು ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು ಹಾಗೂ ಒಂದು ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರ ಹುದ್ದೆ ಮಾತ್ರ ಪ್ರಸ್ತುತ ಮಂಜೂರಾಗಿರುತ್ತವೆ. ಈ ಶಾಖೆಯ ಸಮರ್ಪಕ ಕಾರ್ಯನಿರ್ವಹಣೆಗಾಗಿ ಸದರಿ ಶಾಖೆಗೆ ಹೆಚ್ಚುವರಿಯಾಗಿ ಒಂದು ವಾಣಿಜ್ಯ ತೆರಿಗೆ ಅಧಿಕಾರಿ ವೃಂದದ ಹುದ್ದೆಯನ್ನು ಹಾಗೂ ಒಂದು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ಒದಗಿಸುವುದು ಅವಶ್ಯಕವೆಂದು ಕಂಡುಬರುತ್ತದೆ.

(4) ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಜಾರಿಯಾದ ನಂತರ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಮುಂಗಡ ನಿರ್ಣಯ ಪ್ರಾಧಿಕಾರವನ್ನು ಸ್ಥಾಪಿಸಲಾಗಿದ್ದು, ಇದಕ್ಕಾಗಿ ಪ್ರತ್ಯೇಕವಾಗಿ ಒಂದು ಶಾಖೆಯನ್ನು ಸ್ಥಾಪಿಸಿ ಒಬ್ಬ ಉಪ ಆಯುಕ್ತರ ಸೇವೆಯನ್ನು ಒದಗಿಸಲಾಗಿದೆ. ಈ ಶಾಖೆಗೆ ಹೆಚ್ಚುವರಿಯಾಗಿ ಒಂದು ವಾಣಿಜ್ಯ ತೆರಿಗೆ ಅಧಿಕಾರಿ ವೃಂದದ ಹುದ್ದೆಯನ್ನು ಹಾಗೂ ಒಂದು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ಒದಗಿಸುವುದು ಅವಶ್ಯಕವಾಗಿದೆ.

(5) ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ–1) ಹಾಗೂ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ–2) ಈ ಶಾಖೆಗಳ ಕಾರ್ಯವ್ಯಾಪ್ತಿಯನ್ನು ಪರಿಗಣಿಸಿ, ಸದರಿ ಶಾಖೆಗಳಿಗೆ ಹೆಚ್ಚುವರಿಯಾಗಿ ಒಂದೊಂದು ಡಿ ದರ್ಜೆ ನೌಕರರ ಹುದ್ದೆಯನ್ನು ಒದಗಿಸುವುದು ಅವಶ್ಯಕವಾಗಿದೆ.

(6) ಮುಂದುವರೆದು, ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು ಈ ವಲಯದಲ್ಲಿ 8 ಉಪ ಆಯುಕ್ತರು, 27 ಸಹಾಯಕ ಆಯುಕ್ತರು, 66 ವಾಣಿಜ್ಯ ತೆರಿಗೆ ಅಧಿಕಾರಿ ಹುದ್ದೆಗಳು ಸೇರಿದಂತೆ ಒಟ್ಟು 367 ಮಂಜೂರಾದ ಹುದ್ದೆಗಳಿದ್ದು, ಸದರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ ಹಾಗೂ ಸಿಬ್ಬಂದಿಗಳ ಸಿಬ್ಬಂದಿ ಶಾಖೆಗೆ ಸಂಬಂಧಿಸಿದ ಕಾರ್ಯಗಳು, ಸರ್ಕಾರಿ ವಾಹನಗಳಿಗೆ ಸಂಬಂಧಿಸಿದ ಕಾರ್ಯಗಳ ನಿರ್ವಹಣೆ ಹಾಗೂ ವಾಣಿಜ್ಯ ತೆರಿಗೆ ಕಾರ್ಯಾಲಯ–2 ರ ಕಟ್ಟಡ ನಿರ್ವಹಣೆಗಾಗಿ ಅಪರ ಆಯುಕ್ತರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸಲು ಪ್ರಸ್ತುತ ವಾಣಿಜ್ಯ ತೆರಿಗೆ ಅಧಿಕಾರಿ ವೃಂದದ ಒಂದು ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆ ಮಾತ್ರ ಮಂಜೂರಾಗಿದ್ದು, ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಯ ಕಾರ್ಯಬಾಹುಳ್ಯವನ್ನು ಅವಲೋಕಿಸಿ, ಹೆಚ್ಚುವರಿಯಾಗಿ ಒಂದು ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರ ವೃಂದದ ಹುದ್ದೆಯನ್ನು ಒದಗಿಸುವುದು ಅವಶ್ಯಕವೆಂದು ಕಂಡುಬಂದಿರುತ್ತದೆ.

ಮೇಲೆ ವಿವರಿಸಿರುವಂತೆ ಸ್ಥಳಾಂತರಗೊಳಿಸಬೇಕಾದ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು ಹಾಗೂ ವಾಣಿಜ್ಯ ತೆರಿಗೆ ಅಧಿಕಾರಿ ಹುದ್ದೆಗಳನ್ನು ಇಲಾಖೆಯ ಬೆಂಗಳೂರು ಕೇಂದ್ರ ಕಾರ್ಯಸ್ಥಾನದ ಇತರೇ ವಿಭಾಗಗಳಿಂದ ಸ್ಥಳಾಂತರಿಸಿ ಪುನರ್‌ವ್ಯವಸ್ಥೆಯಿಂದ ಮರುನಾಮಕರಣ ಮಾಡಬಹುದಾಗಿರುತ್ತದೆ. ಹಾಗೆಯೇ, ದ್ವಿತೀಯ ದರ್ಜೆ

ಸಹಾಯಕರ ಹಾಗೂ ಡಿ ದರ್ಜೆ ನೌಕರರ ಹುದ್ದೆಗಳನ್ನೂ ಸಹ ಸ್ಥಳಾಂತರಗೊಳಿಸಬಹುದಾಗಿರತ್ತದೆ. ಆದುದರಿಂದ ಕೆಳಕಂಡಂತೆ ಸ್ಥಳಾಂತರ/ಮರುನಾಮಕರಣ ಮಾಡಲು ಪ್ರಸ್ತಾವಿಸಲಾಗಿದೆ.

(1) ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಯ ಇ-ಆಡಳಿತ ಶಾಖೆಗೆ ಮಂಜೂರಾಗಿರುವ 5 ಸಹಾಯಕ ಆಯುಕ್ತರ ಹುದ್ದೆಗಳ ಪೈಕಿ, ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಇ-ಆಡಳಿತ)-5 ಹುದ್ದೆಯನ್ನು ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು ಕಛೇರಿಗೆ ಸ್ಥಳಾಂತರಗೊಳಿಸಿ, ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇಂದ್ರ ಕಛೇರಿ) ಎಂದು ನಾಮಕರಣಗೊಳಿಸಲು ಪ್ರಸ್ತಾವಿಸಲಾಗಿದೆ.

(2) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು ಈ ಕಛೇರಿಗೆ ಮಂಜೂರಾಗಿರುವ ವಾಣಿಜ್ಯ ತೆರಿಗೆ ಅಧಿಕಾರಿ ವೃಂದದ 5 ಹುದ್ದೆಗಳನ್ನು ಆಯುಕ್ತರ ಕಛೇರಿಗೆ ಸ್ಥಳಾಂತರಿಸಿ, ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಪರಿಷ್ಕರಣೆ ಮತ್ತು ವಸೂಲಿ) ಶಾಖೆಗೆ ಎರಡು ಹುದ್ದೆ, ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಲೆಕ್ಕಪರಿಶೋಧನೆ) ಶಾಖೆಗೆ, ಸಹಾಯ ಪೀಠಕ್ಕೆ ಹಾಗೂ ಮುಂಗಡ ನಿರ್ಣಯ ಪ್ರಾಧಿಕಾರದ ಶಾಖೆಗಳಿಗೆ ತಲಾ ಒಂದು ಹುದ್ದೆಯಂತೆ ಒದಗಿಸಲು ಪ್ರಸ್ತಾವಿಸಲಾಗಿದೆ. ಅದರಂತೆ, ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-46) ರಿಂದ ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-50) ರವರೆಗಿನ 5 ಹುದ್ದೆಗಳನ್ನು ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿಗೆ ಸ್ಥಳಾಂತರಿಸಿ, ಸದರಿ ಹುದ್ದೆಗಳನ್ನು ಮೇಲೆ ತಿಳಿಸಿರುವ ಶಾಖೆಗಳಿಗೆ ಒದಗಿಸಿ, ಸದರಿ ಹುದ್ದೆಗಳನ್ನು ಕ್ರಮವಾಗಿ ವಾಣಿಜ್ಯ ತೆರಿಗೆ ಅಧಿಕಾರಿ (ಸಹಾಯ ಪೀಠ), ವಾಣಿಜ್ಯ ತೆರಿಗೆ ಅಧಿಕಾರಿ (ಪರಿಷ್ಕರಣೆ ಮತ್ತು ವಸೂಲಿ-1), ವಾಣಿಜ್ಯ ತೆರಿಗೆ ಅಧಿಕಾರಿ (ಪರಿಷ್ಕರಣೆ ಮತ್ತು ವಸೂಲಿ-2), ವಾಣಿಜ್ಯ ತೆರಿಗೆ ಅಧಿಕಾರಿ (ಲೆಕ್ಕಪರಿಶೋಧನೆ), ಮತ್ತು ವಾಣಿಜ್ಯ ತೆರಿಗೆ ಅಧಿಕಾರಿ(ಮುಂಗಡ ನಿರ್ಣಯ), ಬೆಂಗಳೂರು ಎಂದು ಮರುನಾಮಕರಣಗೊಳಿಸಲು ಪ್ರಸ್ತಾಪಿಸಲಾಗಿದೆ.

(3) ಮುಂದುವರೆದು, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ) ಕಛೇರಿಗೆ ಮಂಜೂರಾಗಿರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ಪೈಕಿ 4 ಹುದ್ದೆಗಳನ್ನು ಆಯುಕ್ತರ ಕಛೇರಿಗೆ ಸ್ಥಳಾಂತರಿಸಿ, ಕ್ರಮವಾಗಿ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಪರಿಷ್ಕರಣೆ ಮತ್ತು ವಸೂಲಿ) ಶಾಖೆಗೆ ಎರಡು, ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಲೆಕ್ಕಪರಿಶೋಧನೆ) ಶಾಖೆಗೆ ಒಂದು ಹಾಗೂ ಮುಂಗಡ ನಿರ್ಣಯ ಶಾಖೆಗೆ ಒಂದು ಹುದ್ದೆಯನ್ನು ಒದಗಿಸಲು ಪ್ರಸ್ತಾವಿಸಲಾಗಿದೆ.

(4) ಹಾಗೆಯೇ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ) ಕಛೇರಿಗೆ ಮಂಜೂರಾಗಿರುವ ಡಿ ದರ್ಜೆ ನೌಕರರ ಹುದ್ದೆಗಳ ಪೈಕಿ 2 ಹುದ್ದೆಗಳನ್ನು ಆಯುಕ್ತರ ಕಛೇರಿಗೆ ಸ್ಥಳಾಂತರಿಸಿ, ಕ್ರಮವಾಗಿ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ-1) ಹಾಗೂ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ-2) ಶಾಖೆಗಳಿಗೆ ತಲಾ ಒಂದೊಂದು ಹುದ್ದೆಗಳನ್ನು ಒದಗಿಸಲು ಪ್ರಸ್ತಾಪಿಸಲಾಗಿದೆ.

(5) ಈ ರೀತಿ ಮರುನಾಮಕರಣಗೊಳಿಸಿದ ನಂತರ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ) ಕಛೇರಿಗೆ ಮಂಜೂರಾಗಿರುವ ವಾಣಿಜ್ಯ ತೆರಿಗೆ ಅಧಿಕಾರಿ ವೃಂದದ ಪದನಾಮವು ಅನುಕ್ರಮಣಿಕೆಯಲ್ಲಿ ಮುಂದುವರೆಸಿದಲ್ಲಿ ಅವುಗಳನ್ನು ಸುಲಭವಾಗಿ ಗುರುತಿಸಬಹುದೆಂಬ ಉದ್ದೇಶದಿಂದಾಗಿ, ಅವುಗಳನ್ನು ಸಹ ಅನುಕ್ರಮಗೊಳಿಸಿ ಮರುನಾಮಕರಣಗೊಳಿಸಲು ಪ್ರಸ್ತಾಪಿಸಲಾಗಿದೆ.

ಮೇಲೆ ಪ್ರಸ್ತಾಪಿಸಿದ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**<u>ಆದೇಶ ಸಂಖ್ಯೆ: ಸಿಬ್ಬಂದಿ–3/3.ಎಫ್/ಸಿ.ಆರ್–08/17–18, ದಿನಾಂಕ: 16.07.2018</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಎಂ.ಎಸ್.ಶ್ರೀಕರ್, ಭಾ.ಆ.ಸೇ., ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಆದ ನಾನು ಉಲ್ಲೇಖದ ಸರ್ಕಾರದ ಆದೇಶದಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ, ಈ ಆದೇಶದ ಅನುಬಂಧ–1 ರಲ್ಲಿ ಕಾಣಿಸಿರುವ ಕೋಷ್ಟಕದ ಅಂಕಣ (3) ರಲ್ಲಿನ ಹುದ್ದೆಗಳನ್ನು ಅದೇ ಅನುಬಂಧದ ಅಂಕಣ (4) ರಂತೆ ಸ್ಥಳಾಂತರಿಸಿ ಮರುನಾಮಕರಣಗೊಳಿಸುತ್ತಾ, ಅದೇ ಕೋಷ್ಟಕದ ಅಂಕಣ (5) ರಲ್ಲಿ ಕಾಣಿಸಿರುವ ಅಧಿಕಾರಿಗಳಿಗೆ ವೇತನ ಹಾಗೂ ಇತರೆ ಭತ್ಯೆಗಳನ್ನು ಖಜಾನೆಯಿಂದ ಸೆಳೆದು ವಿತರಿಸುವ ಅಧಿಕಾರಿಗಳನ್ನಾಗಿ ಹಾಗೂ ನಿಯಂತ್ರಣಾಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಿರುತ್ತೇನೆ.

ಹಾಗೆಯೇ, ಅನುಬಂಧ–2 ರಲ್ಲಿ ಕಾಣಿಸಿರುವ ಕೋಷ್ಟಕದ ಅಂಕಣ (3) ರಲ್ಲಿನ ಹುದ್ದೆಗಳನ್ನು ಅಂಕಣ (4) ರಲ್ಲಿ ತಿಳಿಸಿರುವ ಕಛೇರಿಗಳಿಗೆ ಸ್ಥಳಾಂತರಿಸಿ ಮರುಹಂಚಿಕೆ ಮಾಡಿ, ಅದೇ ಕೋಷ್ಟಕದ ಅಂಕಣ (5) ರಲ್ಲಿರುವಂತೆ ವೇತನ ಹಾಗೂ ಇತರೆ ಭತ್ಯೆಗಳನ್ನು ಖಜಾನೆಯಿಂದ ಸೆಳೆದು ವಿತರಿಸುವ ಅಧಿಕಾರಿಗಳನ್ನಾಗಿ ಹಾಗೂ ನಿಯಂತ್ರಣಾಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಿರುತ್ತೇನೆ.

ಈ ಆದೇಶವು ತಕ್ಷಣದಿಂದ ಜಾರಿಗೆ ಬಂದಿದ್ದು, ಮುಂದಿನ ಆದೇಶದವರೆಗೆ ಚಾಲ್ತಿಯಲ್ಲಿರುತ್ತದೆ.

(ಎಂ.ಎಸ್. ಶ್ರೀಕರ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು

**<u>ಪ್ರತಿ:–</u>**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
2. ಮಹಾಲೇಖಪಾಲರು (ಎ & ಇ) ಕರ್ನಾಟಕ, ಪಿ.ಬಿ.ನಂ.5329/5369, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಇಲಾಖೆಯ ಎಲ್ಲಾ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಜಂಟಿ ಆಯುಕ್ತರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಸಾರ್ವಜನಿಕ ಸಂಪರ್ಕ), ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು (ಇ–ಆಡಳಿತ), ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
7. ಆಯುಕ್ತರ ಕಛೇರಿಯ ಎಲ್ಲಾ ಶಾಖಾ ಮುಖ್ಯಸ್ಥರಿಗೆ.
8. ಕಛೇರಿ ಪ್ರತಿ.

# ಅನುಬಂಧ – 1

## ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು / ವಾಣಿಜ್ಯ ತೆರಿಗೆ ಅಧಿಕಾರಿ ವೃಂದದ ಹುದ್ದೆಗಳ ಸ್ಥಳಾಂತರ ಹಾಗೂ ಮರುನಾಮಕರಣ

| ಕ್ರ.ಸಂ. | ಸ್ಥಳಾಂತರ/ ಮರುನಾಮಕರಣ ಗೊಳ್ಳುವ ಹುದ್ದೆಯು ಪ್ರಸ್ತುತ ಮಂಜೂರಾಗಿರುವ ವಿಭಾಗ | ಸ್ಥಳಾಂತರ / ಮರುನಾಮಕರಣಗೊಳ್ಳುವ ಹುದ್ದೆಯ ಪ್ರಸ್ತುತ ಪದನಾಮ ಮತ್ತು ಕಛೇರಿ | ಸ್ಥಳಾಂತರಿಸಿದ / ಮರುನಾಮಕರಣಗೊಳಿಸಿದ ನಂತರದ ಪದನಾಮ ಮತ್ತು ಸ್ಥಳ | ವೇತನ ಮತ್ತು ಇತರೆ ಭತ್ಯೆಗಳನ್ನು ಬಟವಾಡೆ ಮಾಡುವ ಅಧಿಕಾರಿ / ನಿಯಂತ್ರಣಾಧಿಕಾರಿಗಳು |
|---|---|---|---|---|
| 1 | 2 | 3 | 4 | 5 |
| 1 | ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಬೆಂಗಳೂರು | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಇ-ಆಡಳಿತ)-5, ಬೆಂಗಳೂರು | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇಂದ್ರ ಕಛೇರಿ), ಬೆಂಗಳೂರು | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು |
| 3 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-46), ಬೆಂಗಳೂರು | ವಾಣಿಜ್ಯ ತೆರಿಗೆ ಅಧಿಕಾರಿ (ಸಹಾಯಕ ಪೀಠ), ಬೆಂಗಳೂರು | ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಬೆಂಗಳೂರು |
| 4 | ಮೇಲಿನಂತೆ | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-47), ಬೆಂಗಳೂರು | ವಾಣಿಜ್ಯ ತೆರಿಗೆ ಅಧಿಕಾರಿ (ಪರಿಷ್ಕರಣೆ ಮತ್ತು ವಸೂಲಿ-1), ಬೆಂಗಳೂರು | ಮೇಲಿನಂತೆ |
| 5 | ಮೇಲಿನಂತೆ | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-48), ಬೆಂಗಳೂರು | ವಾಣಿಜ್ಯ ತೆರಿಗೆ ಅಧಿಕಾರಿ (ಪರಿಷ್ಕರಣೆ ಮತ್ತು ವಸೂಲಿ-2), ಬೆಂಗಳೂರು | ಮೇಲಿನಂತೆ |
| 6 | ಮೇಲಿನಂತೆ | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-49), ಬೆಂಗಳೂರು | ವಾಣಿಜ್ಯ ತೆರಿಗೆ ಅಧಿಕಾರಿ (ಲೆಕ್ಕಪರಿಶೋಧನೆ), ಬೆಂಗಳೂರು | ಮೇಲಿನಂತೆ |
| 7 | ಮೇಲಿನಂತೆ | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-50), ಬೆಂಗಳೂರು | ವಾಣಿಜ್ಯ ತೆರಿಗೆ ಅಧಿಕಾರಿ (ಮುಂಗಡ ನಿರ್ಣಯ), ಬೆಂಗಳೂರು | ಮೇಲಿನಂತೆ |
| 8 | ಮೇಲಿನಂತೆ | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-51), ಬೆಂಗಳೂರು | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-46), ಬೆಂಗಳೂರು | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು |
| 9 | ಮೇಲಿನಂತೆ | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-52), ಬೆಂಗಳೂರು | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-47), ಬೆಂಗಳೂರು | ಮೇಲಿನಂತೆ |
| 10 | ಮೇಲಿನಂತೆ | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-53), ಬೆಂಗಳೂರು | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-48), ಬೆಂಗಳೂರು | ಮೇಲಿನಂತೆ |
| 11 | ಮೇಲಿನಂತೆ | ವಾಣಿಜ್ಯ ತೆರಿಗೆ ಅಧಿಕಾರಿ (ಜಾಗೃತಿ-54), ಬೆಂಗಳೂರು | ವಾಣಿಜ್ಯ ತೆರಿಗೆ ಅಧಿಕಾರಿ (ಪತ್ರಾಂಕಿತ ವ್ಯವಸ್ಥಾಪಕರು), ಜಾಗೃತಿ, ಬೆಂಗಳೂರು | ಮೇಲಿನಂತೆ |

ವಾಣಿಜ್ಯ ತೆರಿಗೆಗಳ ಆಯುಕ್ತರು,
ಕರ್ನಾಟಕ, ಬೆಂಗಳೂರು

# ಅನುಬಂಧ – 2

## ದ್ವಿತೀಯ ದರ್ಜೆ ಸಹಾಯಕರ / ಡಿ ದರ್ಜೆ ನೌಕರರ ವೃಂದದ ಹುದ್ದೆಗಳ ಸ್ಥಳಾಂತರ

| ಕ್ರ.ಸಂ. | ಸ್ಥಳಾಂತರಗೊಳ್ಳುವ ಹುದ್ದೆಗಳು ಪ್ರಸ್ತುತ ಮಂಜೂರಾಗಿರುವ ವಿಭಾಗ | ಸ್ಥಳಾಂತರಗೊಳ್ಳುವ ಹುದ್ದೆಗಳ ವೃಂದ ಹಾಗೂ ಸಂಖ್ಯೆ | ಸ್ಥಳಾಂತರಿಸಿದ ಹುದ್ದೆಗಳ ಹಂಚಿಕೆಯ ವಿವರಗಳು | ವೇತನ ಮತ್ತು ಇತರೆ ಭತ್ಯೆಗಳನ್ನು ಬಟವಾಡೆ ಮಾಡುವ ಅಧಿಕಾರಿ / ನಿಯಂತ್ರಣಾಧಿಕಾರಿಗಳು |
|---|---|---|---|---|
| 1 | 2 | 3 | 4 | 5 |
| 1 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ), ಬೆಂಗಳೂರು | ದ್ವಿತೀಯ ದರ್ಜೆ ಸಹಾಯಕರು – 4 ಹುದ್ದೆಗಳು | (1) ಪರಿಷ್ಕರಣೆ & ವಸೂಲಿ ಶಾಖೆಗೆ – 2 ಹುದ್ದೆ<br>(2) ಲೆಕ್ಕಪರಿಶೋಧನೆ ಶಾಖೆಗೆ – 1 ಹುದ್ದೆ<br>(3) ಮುಂಗಡ ನಿರ್ಣಯ ಶಾಖೆಗೆ – 1 ಹುದ್ದೆ | ವಾಣಿಜ್ಯ ತೆರಿಗೆಗಳ ಆಯುಕ್ತರು, ಕರ್ನಾಟಕ, ಬೆಂಗಳೂರು |
| 2 | ಮೇಲಿನಂತೆ | ಡಿ ದರ್ಜೆ ನೌಕರರು – 2 ಹುದ್ದೆಗಳು | (1) ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ–1) – 1 ಹುದ್ದೆ<br>(2) ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ–2) – 1 ಹುದ್ದೆ | ಮೇಲಿನಂತೆ |

ವಾಣಿಜ್ಯ ತೆರಿಗೆಗಳ ಆಯುಕ್ತರು,
ಕರ್ನಾಟಕ, ಬೆಂಗಳೂರು